ಮೂಲ ದಾವಾ ಸಂಖ್ಯೆ 2/2013

ಪಿ.ಡಬ್ಲ್ಯೂ-2

**ದಿಃ 20.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿಪರ ಶ್ರೀ ಟಿ ಆರ್ ಎಸ್ ವಕೀಲರಿಂದಃ –**

ನಾನು ಎಸ್ ಎಸ್ ಎಲ್ ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಹುಲಿಕಟ್ಟಿ ವೀರಣ್ಣ ಎಂದು ಕರೆಯುತ್ತಾರೆ ಎಂದರೆ ಸರಿ. ಮೃತ ಮಾದೇವಮ್ಮನ ಗಂಡ ತಂದೆ ತಾಯಿಯವರ ಹೆಸರು ಗೊತ್ತಾ ಎಂದರೆ ಮಹಾದೇವಮ್ಮ ಗಂಡನ ಹೆಸರು ಗೊತ್ತು ಆದರೆ ತಂದೆ ತಾಯಿಯ ಹೆಸರು ಗೊತ್ತಿರುವುದಿಲ್ಲ. ಮಹಾದೇವಮ್ಮನ ಗಂಡನನ್ನು ನಾನು ನೋಡಿರುವುದಿಲ್ಲ. ಮಹಾದೇವಮ್ಮನ ಗಂಡ ಯಾವಾಗ ಮದುವೆ ಆದರು ಯಾವಾಗ ಮೃತ ಹೊಂದಿದ್ದಾರೆಂದು ಗೊತ್ತಾ ಎಂದರೆ ಗೊತ್ತಿಲ್ಲಾ. ಮಹಾದೇವಮ್ಮನ ಗಂಡ ಮದುವೆ ಆಗಿ ಕಾರ್ಯ ಮಾಡುವುದಕ್ಕಿಂತ ಮೊದಲೇ ಮೃತ ಹೊಂದಿದ್ದಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲಾ. ನೀವು ಎಷ್ಟು ವರ್ಷ ದಿಂದ ಮಹಾದೇವಮ್ಮನನ್ನು ನೋಡಿದ್ದೀರಾ ಎಂದರೆ  ನಾನು ಹುಟ್ಟಿದ 25 ವರ್ಷ ದಿಂದಲೂ ನಾನು ನೋಡಿರುತ್ತೇನೆ ಎನ್ನುತ್ತಾರೆ. ನೀವು ನೋಡಿದಾಗ ಮಹಾದೇವಮ್ಮ ಮದುವೆ ಆಗಿದ್ರಾ ಎಂದರೆ ಹೌದು ಎನ್ನುತ್ತಾರೆ. ಮಹಾದೇವಮ್ಮ ಯಾರ ಮನೆಯಲ್ಲಿ ವಾಸವಾಗಿದ್ದಳು ಎಂದರೆ ಅವರ ತಮ್ಮನ ಮನೆಯ ಪಕ್ಕದ ರೂಮಿನಲ್ಲಿ ವಾಸವಾಗಿದ್ದಳು ಎನ್ನುತ್ತಾರೆ. ಮಹಾದೇವಮ್ಮನ ಅಣ್ಣ ತಮ್ಮಂದಿರು ಯಾರು ಕೂಡ ಮಹಾದೇವಮ್ಮ ನನ್ನು ನೋಡಿಕೊಳ್ಳುತ್ತಿರಲಿಲ್ಲಾ ಎಂದರೆ ಸರಿಯಲ್ಲ. ಮಹಾದೇವಮ್ಮನಿಗೆ ಇಬ್ಬರು ಅಣ್ಣ ತಮ್ಮಂದಿರು ಎನ್ನುತ್ತಾರೆ. ಮಹಾದೇವಮ್ಮ ಅವರ ಅಣ್ಣ ತಮ್ಮಂದಿರ ಮನೆಯಲ್ಲಿ ಮತ್ತು ಅವರ ಸಂಬಂಧಿಕರ ಮನೆಯಲ್ಲಿ ಊಟ ಮಾಡಿಕೊಂಡು ಜೀವನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮಹಾದೇವಮ್ಮ ಅನಕ್ಷರಸ್ತೆ ಎಂದರೆ ಸರಿ. ಕಿತ್ತೂರಿನಲ್ಲಿ ಅವರ ಅಣ್ಣ ತಮ್ಮಂದಿರು ಹೊರತುಪಡಿಸಿ ಉಳಿದ ಅವರ ಸಂಬಂಧಿಕರು ಬೇರೆ ಯಾರು ಇದ್ದರು ಎಂದರೆ ಪಕ್ಕದ ಮನೆಯ ಮಳ್ಳಪ್ಪ ಎನ್ನುವವರು ಇದ್ದರು ಬೇರೆ ಯಾರು ಇದ್ದರೆಂದು ನನಗೆ ಅವರ ಹೆಸರು ಗೊತ್ತಿಲ್ಲಾ. ನೀವು ಕಿತ್ತೂರಿನಲ್ಲಿ ಎಷ್ಟು ವರ್ಷ ದಿಂದ

ವಾಸವಾಗಿದ್ದೀರಾ ಎಂದರೆ ನಾನು ಹುಟ್ಟಿದಾಗಿನಿಂದಲೂ ಕೂಡ ಕಿತ್ತೂರಿನಲ್ಲಿ ವಾಸವಾಗಿದ್ದೇನೆ ಎನ್ನುತ್ತಾರೆ. ಮಹಾದೇವಮ್ಮ ಇದ್ದ ಮನೆಗೂ ನಮ್ಮ ಮನೆಗೂ 30 ಮನೆಗಳ ಅಂತರದಲ್ಲಿ ಇದೆ ಎನ್ನುತ್ತಾರೆ. ಮಹಾದೇವಮ್ಮ ಮೃತಪಟ್ಟಾಗ ಅವರ ವಯಸ್ಸು ಎಷ್ಟು ಆಗಿತ್ತು ಎಂದರೆ 93-94 ಆಗಿರಬಹುದು ಎನ್ನುತ್ತಾರೆ. ಮಹಾದೇವಮ್ಮ ವಿಲ್ ಬರೆದಿದ್ದಾರೆಂದು ಹೇಳುತ್ತೀರಲ್ಲಾ ಆ ಸಮಯದಲ್ಲಿ ಅವರ ವಯಸ್ಸು ಎಷ್ಟು ಆಗಿತ್ತು ಎಂದರೆ 93 ವರ್ಷ ಆಗಿತ್ತು ಎನ್ನುತ್ತಾರೆ. ಪತ್ರಬರಹಗಾರ ಹೆಚ್ ಎಸ್ ಶ್ರೀನಿವಾಸ ರಾವ್ ನಿಮಗೆ ಪರಿಚಯ ಇದ್ದಾರಾ ಎಂದರೆ ಇಲ್ಲಾ. ನಂಜಪ್ಪ ಬಿನ್ ಬಸ್ಸಪ್ಪ ಅವರು ಪರಿಚಯ ಇದ್ದಾರಾ ಎಂದರೆ ನಮ್ಮ ಊರಿನವರು ಪರಿಚಯ ಇದ್ದಾರೆ ಎನ್ನುತ್ತಾರೆ. ನಂಜಪ್ಪ ವಾದಿ ಶ್ರೀಕಾಂತ್ ಇವರ ತಾಯಿ ಅಂದರೆ ಪಿಡಬ್ಲ್ಯೂ1 ರವರ ತಂದೆ ಎಂದರೆ ಸರಿ. ವಿವಾದಿತ ವಿಲ್ಲನ್ನು ಸಾಕ್ಷಿ ನಂಜಪ್ಪನವರು ಪತ್ರ ಬರಹಗಾರರಿಗೆ ಹೇಳಿ ಬರೆಸಿದ್ದರು ಎಂದರೆ ಸರಿಯಲ್ಲ ಮಹಾದೇವಮ್ಮನಿಗೆ 95 ವರ್ಷ ಆಗಿದ್ದರಿಂದ ಅವರಿಗೆ ಯಾವುದೇ ನೆನಪಿನ ಶಕ್ತಿ ಇರಲಿಲ್ಲ ಮತ್ತು ಆರೋಗ್ಯ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ಮಹಾದೇವಮ್ಮ ಅನಕ್ಷರಸ್ಥರಾಗಿದ್ದ ಕಾರಣ ಅವರಿಗೆ ಕೇಸಿನ ವಿಚಾರ ಆಗಲಿ ಅಥವಾ ವಿಲ್ ವಿಚಾರ ಆಗಲಿ ಗೊತ್ತಿಲ್ಲಾ ಎಂದರೆ ಸುಳ್ಳು ಎನ್ನುತ್ತಾರೆ. ವಿವಾದಿತ ವಿಲ್ ನ್ನು ಬರೆಸಲು ಯಾರು ಸಬ್ ರಜಿಸ್ಟರ್ ಕಚೇರಿಯಲ್ಲಿ ಖರ್ಚನ್ನು ಕೊಟ್ಟರು ಎಂದರೆ ಮಹಾದೇವಮ್ಮ ಕೊಟ್ಟಿರುತ್ತಾರೆ ಎನ್ನುತ್ತಾರೆ. ನಿಮ್ಮ ಸಮಕ್ಷಮ ಸಬ್ ರಜಿಸ್ಟರ್ ವಿವಾದಿತ ವಿಲ್ಲನ್ನು ಓದಿ ಹೇಳಿದ್ದಾರಾ ಎಂದರೆ ಓದಿ ಹೇಳಿದ್ದಾರೆ ಎನ್ನುತ್ತಾರೆ. ಸದರಿ ವಿಚಾರವನ್ನು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿದ್ದೀರಾ ಎಂದರೆ ಬರೆದಿಲ್ಲಾ ಎನ್ನುತ್ತಾರೆ. ವಿಲ್ ಪತ್ರದ 4 ನೇ ಪುಟದಲ್ಲಿ ಸದರಿ ವಿಲ್ ಪತ್ರವನ್ನು ನಾನು ಓದಿ ಓದಿಸಿ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮಹಾದೇವಮ್ಮ ಕಿವಿ ಕೇಳುತ್ತಿರಲಿಲ್ಲಾ ಎಂದರೆ ಆಕೆಗೆ ಸ್ವಲ್ಪ ಮಟ್ಟಿಗೆ ಕಿವಿ ಕೇಳುತ್ತಿರಲಿಲ್ಲ ಆದರೆ ಕಣ್ಣು ಕಾಣಿಸುತ್ತಿತ್ತು ಓಡಾಡಲು ಕೈ ಕಾಲು ಚೆನ್ನಾಗಿ ಇತ್ತು ಎನ್ನುತ್ತಾರೆ. ಮಹಾದೇವಮ್ಮ ಕನ್ನಡಕವನ್ನು ಹಾಕುತ್ತಿರಲಿಲ್ಲ. ಯಾವ ಯಾವ

ಆಸ್ತಿಗಳನ್ನು ವಿವಾದಿತ ವಿಲ್ ನಲ್ಲಿ ನಮೂದು ಮಾಡಿದ್ದಾರೆ ಗೊತ್ತಾ ಎಂದರೆ 5 ಆಸ್ತಿಗಳನ್ನು ನಮೂದು ಮಾಡಿದ್ದಾರೆ ಎನ್ನುತ್ತಾರೆ. ಯಾವ ಯಾವ ಆಸ್ತಿಗಳು ಎಂದು ನಿಮಗೆ ಹೇಳಲು ಆಗುತ್ತದೆಯಾ ಎಂದರೆ ಇಲ್ಲಾ ಎನ್ನುತ್ತಾರೆ. ವಿವಾದಿತ ವಿಲ್ ಎಷ್ಟು ಗಂಟೆಗೆ ನೋಂದಣಿ ಮಾಡಿಸಿದ್ರಿ ಎಂದರೆ 12 ಗಂಟೆಗೆ ಸಬ್ ರಜಿಷ್ಟರ್ ಕಚೇರಿಗೆ ಒಳಗೆ ಹೋಗಿ 12.15 ಗಂಟೆ ಸವಯಕ್ಕೆ ಹೊರಗಡೆ ಬಂದಿರುತ್ತೇವೆ ಎನ್ನುತ್ತಾರೆ. ಮಹಾದೇವಮ್ಮನ ಹೆಬ್ಬೆಟ್ಟಿನ ಗುರುತನ್ನು ನೀವು ಗುರುತಿಸಿಲ್ಲಾ ಎಂದರೆ ಸಾಕ್ಷಿಯು ಶ್ರೀನಿವಾಸರಾವ್ ರವರು ಗುರುತಿಸಿರುತ್ತಾರೆ ಎನ್ನುತ್ತಾರೆ. ನೀವು ಶ್ರೀನಿವಾಸ ರಾವ್ ರವರು ಗುರುತಿಸಿರುತ್ತಾರೆಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಮಹಾದೇವಮ್ಮ ಗಂಡನ ಸಂಬಂಧಿಕರು ಯಾರು ಎಂದು ನಿಮಗೆ ಗೊತ್ತಿದೆಯಾ ಎಂದರೆ ಗೊತ್ತು. ಬಸ್ಸಪ್ಪ ಎಂಬ ಅಣ್ಣನ ಬಗ್ಗೆ ಗೊತ್ತು ಉಳಿದವರು ಗೊತ್ತಿಲ್ಲಾ ಎನ್ನುತ್ತಾರೆ. ವಿಲ್ಲನ್ನು ನೀವು ವಾದಿ ನಂಜಪ್ಪ ಎಲ್ಲರೂ ಸೇರಿಕೊಂಡು ಸೃಷ್ಟಿಮಾಡಿಕೊಂಡಿದ್ದೀರಾ ಎಂದರೆ ಸರಿಯಲ್ಲ. ವಿವಾದಿತ ವಿಲ್ ಪತ್ರ ಆಗಿದೆ ಎಂದು ಹೇಳುವ 4 ತಿಂಗಳದ ನಂತರ ಮಹಾದೇವಮ್ಮ ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿಯು 5-6 ತಿಂಗಳ ನಂತರ ಮೃತ ಪಟ್ಟಿರುತ್ತಾರೆ ಎನ್ನುತ್ತಾರೆ. ಮಹಾದೇವಮ್ಮ ಯಾವ ಯಾವ ಕೇಸ್ ಗಳನ್ನು ಯಾರ ಯಾರ ವಿರುದ್ಧ ಹಾಕಿದ್ದರೆಂದು ಗೊತ್ತಾ ಎಂದರೆ ನನಗೆ ಗೊತ್ತಿಲ್ಲಾ ಎನ್ನುತ್ತಾರೆ. ಮಹಾದೇವಮ್ಮ ಚಿಕ್ಕವಯಸ್ಸಿನಲ್ಲಿ ವಿಧವೆಯಾದ ಕಾರಣ ಮಾನಸಿಕ ಅಸ್ವಸ್ಥರಾಗಿದ್ದರು ಎಂದರೆ ಸುಳ್ಳು ಎನ್ನುತ್ತಾರೆ. ಮಹಾದೇವಮ್ಮ ನಿಮ್ಮನ್ನು ವಿಲ್ ಬರೆಯಲು ಕರೆದಿರುತ್ತಾರೆ ನಾವು ಹೋಗಿರುತ್ತೇವೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಮಹಾದೇವಮ್ಮನೇ ಪತ್ರ ಬರಹಗಾರರಿಗೆ ಮಾಹಿತಿ ಕೊಟ್ಟಿರುತ್ತಾಳೆ ಎಂದು ಹೇಳುತ್ತೀರಲ್ಲಾ ಅದು ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ಸಮಕ್ಷಮ ಮಹಾದೇವಮ್ಮ ಹೆಬ್ಬೆಟ್ಟಿನ ಗುರುತು ಹಾಕಿದ್ದಳು ಎಂದು ಹೇಳುತ್ತೀರಲ್ಲಾ ಅದು ಸುಳ್ಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಮ್ಮ ಸಮಕ್ಷಮ ಮಹಾದೇವಮ್ಮ ಹೆಬ್ಬೆಟ್ಟಿನ ಗುರುತು ಹಾಕಿದ ನಂತರ ನಾವು ಸಹಿ ಮಾಡಿದ್ದೇವೆ ಎನ್ನುತ್ತಾರೆ. ನೀವು ಈ ಹಿಂದೆ ಇದೇ ವಿಲ್ ಗೆ

ಸಂಬಂಧಪಟ್ಟಂತೆ ಓ ಎಸ್ ನಂಬರ 12/2009 ರಲ್ಲಿ ಸಾಕ್ಷಿ ಕೊಟ್ಟಿದ್ದೀರಾ ಎಂದರೆ ಸರಿ. ನೀವು ವಾದಿ ಸುಜಾತ, ಶ್ರೀಕಾಂತ ವಿಶ್ವಾಸಿಕರು ಎಂದರೆ ಸರಿ. ಅವರು ನಮ್ಮ ಊರಿನವರು ಎನ್ನುತ್ತಾರೆ. ನಿಮ್ಮ ಊರಿನವರ ವಿಶ್ವಾಸದ ಮೇಲೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಮಹಾದೇವಮ್ಮ ಯಾವುದೇ ವಿಲ್ಲನ್ನು ಬರೆದಿರುವುದಿಲ್ಲಾ ನೀವು ಸೃಷ್ಟಿ ಮಾಡಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.